## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ

## ಸಿ.ಸಿ. 23/2025

| ಪಿರ್ಯಾದುದಾರರು | | ಆರೋಪಿ |
|---|---|---|
| ಕರ್ನಾಟಕ ಸರ್ಕಾರದ ಪರವಾಗಿ ಹರಿಹರ ಗ್ರಾಮಾಂತರ ಪೋ.ಠಾಣೆ, ಹರಿಹರ | ವಿರುದ್ಧ | ಕಲ್ಲೇಶ ತಂದೆ ಶಂಕರಪ್ಪ, 34 ವರ್ಷ, ಡ್ರೈವರ್, ವಾಸ: ಸಚ್ಚಿದಾನಂದ ನಗರ, ಕಲಘಟಗಿ ತಾಲ್ಲೂಕು, ಧಾರವಾಡ. |

## : ಆಪಾದನೆ :

ದಿನಾಂಕ: 04.11.2024 ರಂದು ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹರಗನಹಳ್ಳಿಯ ಹತ್ತಿರ ಹಾದು ಹೋಗಿರುವ ಸೂಳೆಕೆರೆಗೆ ಹಳ್ಳದ ಹತ್ತಿರ ಎನ್.ಹೆಚ್-48 ರಸ್ತೆಯ ಹತ್ತಿರ ಚಾಸಾ.1 ರವರು ಕೆಎ-02/ಎಂಕೆ-1722 ನೇ ಕಾರಿನಲ್ಲಿ ಚಾಸಾ.4, 5 ಮತ್ತು 6 ರವರನ್ನು ಕೂರಿಸಿಕೊಂಡು ಬೆಂಗಳೂರಿನಿಂದ ಹೊರಟು ಕದರಮಂಡಲಗಿ ಶ್ರೀ ಆಂಜನೇಯ ಹಾಗೂ ಹಿರೇಕೆರೂರು ದುರುಗಮ್ಮ ದೇವಸ್ಥಾನಕ್ಕೆ ಹೋಗಿ ಪೂಜೆ ಮುಗಿಸಿಕೊಂಡು ವಾಪಾಸ್ ಬೆಂಗಳೂರಿಗೆ ಹೋಗುತ್ತಿರುವಾಗ ಆರೋಪಿಯಾದ ನೀನು ತನ್ನ ಕೆಎ-27/ಎಫ್-0811 ನೇ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ.1 ರವರು ಚಲಾಯಿಸುತ್ತಿದ್ದ ಕೆಎ-02/ಎಂಕೆ-1722 ನೇ ಕಾರಿನ ಹಿಂಭಾಗಕ್ಕೆ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತೀರಿ. ಆದಕಾರಣ ಆರೋಪಿತನಾದ ನೀನು ಭಾರತೀಯ ನ್ಯಾಯ ಸಂಹಿತೆಯ ಕಲಂ.281 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತದೆ.

2 ನೇದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀನು ಬಸ್ಸನ್ನು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡಿದ್ದು, ಆದಕಾರಣ ಆರೋಪಿತನಾದ ನೀನು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತದೆ.

ಪ್ರ .1 ಮೇಲೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ತಿಳಿಯಿತೇ ?

ಉ:

ಪ್ರ .2 ನೀವು ಅಪರಾಧವನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ವಿಚಾರಣೆಯಾಗಬೇಕೋ ?

ಉ:

(ಆರೋಪಿತನ ವಿಚಾರಣೆ ನನ್ನ ಸಮಕ್ಷಮ ನಡೆದಿದ್ದು ಬರೆದ ರೆಕಾರ್ಡ ಸತ್ಯದಿಂದ ಕೂಡಿದೆ ಎಂದು ದೃಢಿಕರಿಸುತ್ತೇನೆ)

ಸಹಿ/-

ದಿನಾಂಕ: 18.06.2025 — ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಸ್ಥಳ: ಹರಿಹರ — ಜೆಎಂಎಫ್ ಸಿ, ಹರಿಹರ.